1ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 421/2025**

ಸರ್ಕಾರದ ಪರವಾಗಿ
ಕುಂದಾಪುರ ಸಂಚಾರಿ ಠಾಣಾ ಪೋಲಿಸರು --- ಪಿರ್ಯಾದಿದಾರರು

ನಾರಾಯಣ ಪೂಜಾರಿ, 59 ವರ್ಷ,
ತಂದೆ: ಅಣ್ಣಪ್ಪ ಪೂಜಾರಿ
ವಾಸ: ಪ್ರಿಯದರ್ಶಿನಿ ನಿಲಯ,
ಮೂಡ್ಲಕಟ್ಟೆ ಅಂಚೆ, ಕಂದಾವರ ಗ್ರಾಮ,
ಉಡುಪಿ ತಾಲೂಕು. --- ಆರೋಪಿ

**:ಆಪಾದನೆ:**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆ ಏನೆಂದರೆ:**

ಆಪಾದಿತರಾದ ನೀವು ದಿ. 22.01.2025 ರಂದು ಮುಂಜಾವಿನಲ್ಲಿ ಕುಂದಾಪುರ ತಾಲೂಕು, ವಡೇರಹೋಬಳಿ ಬಿ.ಸಿ. ರೋಡ್ ನಲ್ಲಿ ಆರೋಪಿತರಾದ ನೀವು ಪ್ಯಾಸೆಂಜರ್ ಆಟೋ ರಿಕ್ಷಾ ನಂಬ್ರ ಕೆಎ 20 ಡಿ 4233 ನೇಯದನ್ನು ಮೂಡ್ಲಕಟ್ಟೆ ಕಡೆಯಿಂದ ಬಸ್ರೂರು ಮೂರಕೈ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವುಂಟಾಗುವ ರೀತಿಯಲ್ಲಿ ಚಾಲನೆ ಮಾಡಿದ್ದು, ಆ ಮೂಲಕ ಆಪಾದಿತರಾದ ನೀವು ಕಲಂ 281 ಬಿ.ಎನ್.ಎಸ್ ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲಯಿಸಿಕೊಂಡು ಬಂದು ಬೆಳಿಗ್ಗೆ 6.00 ಗಂಟೆಗೆ ವಡೇರಹೋಬಳಿ ಗ್ರಾಮದ ಬಿ.ಸಿ. ರೋಡ್ ನಲ್ಲಿರುವ ನಿತ್ಯಾಧರ್ ಹಾಲ್ ಮತ್ತು ಫ್ಲೋರಾ ಗ್ರಾಂಡ್ ಲಾಡ್ಜ್ ಹತ್ತಿರ ತಲುಪುವಷ್ಟರಲ್ಲಿ ಬಸ್ರೂರು ಮೂರುಕೈ ಕಡೆಗೆ ವಾಕಿಂಗ್ ಹೋಗುತ್ತಿದ್ದ ಸೋಮಯ್ಯ ಪ್ರಾಯ 61 ವರ್ಷ ರವರಿಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಅವರ ಬಲಕಾಲ ಪಾದದ ಮೇಲೆ ಮಣಿಗಂಟಿನಲ್ಲಿ ಮೂಳೆ ಮುರಿತದ ತೀವ್ರ ಸ್ವರೂಪದ ರಕ್ತಗಾಯ, ಬಲಗೈ ತೋಳಿನ ಮೇಲೆ ತರಚಿದ ರಕಕ್ತಗಾಯ, ಎರಡು ಕಾಲ ಮೊಣಗಂಟಿನಲ್ಲಿ ತರಚಿದ ರಕ್ತಗಾಯ, ಮುಖದಲ್ಲಿ ಅಲ್ಲಲ್ಲಿ ತರಚಿದ ರಕ್ತಗಾಯ, ತಲೆ ಬಲಬದಿ ರಕ್ತ ಹೆಪ್ಪುಗಟ್ಟಿದ ತೀವ್ರ ಸ್ವರೂಪದ ಗುದ್ದಿದ ಒಳಗಾಯವಾಗಿದ್ದು ಮಾತನಾಡುವ ಸ್ಥಿತಿಯಲ್ಲಿ ಇಲ್ಲದೆ ದಿ. 22.01.2025 ರಂದು ಬೆಳಿಗ್ಗೆ 7.15 ಗಂಟೆಗೆ ಮೃತಪಟ್ಟಿದ್ದು, ಆ ಮೂಲಕ ಕಲಂ 125(ಬಿ) ಬಿ.ಎನ್.ಎಸ್ ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಚಲಾಯಿಸಿ ಅಪಘಾತ ಪಡಿಸಿ ಅಪಘಾತಕ್ಕೆ ಒಳಗಾಗಿದ್ದ ಸೋಮಯ್ಯ ರವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸದೇ ಘಟನೆ ಬಗ್ಗೆ ಪೊಲೀಸ್ ಠಾಣೆಗೆ ಮಾಹಿತಿಯನ್ನು ನೀಡದೆ ಆಟೋ ರಿಕ್ಷಾದೊಂದಿಗೆ

ಪರಾರಿಯಾಗಿದ್ದು, ಆ ಮೂಲಕ ಕಲಂ 134(ಎ)(ಬಿ) ಜೊತೆಗೆ 187 ಐಎಂವಿ ಕಾಯಿದೆ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕ :29.11.2025

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ**

**ಸಿ.ಸಿ. ಸಂಖ್ಯೆ :57/2025**

ಫಿರ್ಯಾದುದಾರರು : ಸರಕಾರದ ಪರವಾಗಿ ಕೋಟಾ ಠಾಣಾ ಪೋಲಿಸರು,

**- ವಿರುದ್ಧ-**

ಆರೋಪಿ : ನಾರಾಯಣ ಪೂಜಾರಿ, ತಂದೆ: ಅಣ್ಣಪ್ಪ ಪೂಜಾರಿ

**1. ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?**

ಉ.

**2.** ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.?

ಉ.

ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬೆರದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.